## 29. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗೆಣಸಿನಕುಣಿ, ಸಾಗರ ತಾ ಶಿವಮೊಗ್ಗ ಜಿ.

ದೇಶದ ಭವಿಷ್ಯವನ್ನು ರೂಪಿಸಲು ಬಳಸಬಹುದಾದ ಅತ್ಯಂಥ ಶಕ್ತಿಶಾಲಿಯಾದ ಆಯುಧವೆಂದರೆ ಶಿಕ್ಷಣ ಎಂಬ ಮಹಾನ್ ಮಾನವತಾವಾದಿ ನೆಲ್ಸನ್ ಮಂಡೇಲಾ ಅವರ ಹೇಳಿಕೆಯಂತೆ ನಮ್ಮದೇಶದ ನಿಜವಾದ ಚಾಲಕ ಶಕ್ತಿ ಇಲ್ಲಿನ ಶಿಕ್ಷಣ ವ್ಯವಸ್ಥೆಯೇ ಆಗಿದೆ. ಎಂಬುದನ್ನು ಅರಿತ ಗೆಣಸಿನಕುಣಿ ಜನತೆ 1964 ರಿಂದ ಇಂದಿನ ವರೆಗೂ **"ಶಾಲೆಗಾಗಿ ನಾವು ನೀವು"** ಹೇಳಿಕೆಗೆ ಮಾದರಿಯಾಗಿದ್ದಾರೆ. ಅವರ ಭಾವನೆಯಲ್ಲಿ ಶಾಲೆ ಮತ್ತು ದೇವಾಲಯಗಳು ಎರಡು ಒಂದೆ ಆಗಿದ್ದು ಅದರ ಉನ್ನತಿಯೇ ಇಡೀ ಊರಿನ ಅಭಿವೃದ್ಧಿ ಎಂಬುದನ್ನು ಮನಗಂಡ ಇವರನ್ನು ಪಡೆದ ನಾವೇ ಧನ್ಯರು.

ಶಾಲೆಯ ಭೌತಿಕ ಅಭಿವೃದ್ಧಿ ಎಷ್ಟು ಮುಖ್ಯವೋ ಶೈಕ್ಷಣಿಕ ಅಭಿವೃದ್ಧಿಯೂ ಅಷ್ಟೇ ಮುಖ್ಯ ಎನ್ನುವುದನ್ನು ಅರಿತ ಶಿಕ್ಷಕ ವೃಂದದವರಿಂದ ಹೊಸ-ಹೊಸ ಯೋಜನೆಗಳ ಕುರಿತು ಚರ್ಚಿಸಿ ಪ್ರತಿವರ್ಷವೂ ವಿನೂತನವಾದ ಕಾರ್ಯಕ್ರಮಗಳನ್ನು, 2006-07 ರಿಂದ ಇಂದಿನ ವರೆಗೂ ನಡೆಸುತ್ತಾ ಬಂದಿದೆ. ಆಯಾಕಾಲದ ಎಸ್.ಡಿ.ಎಂ.ಸಿಯವರ ಕೊಡುಗೆ ಅಪಾರವಾದುದು. ನನಗನಿಸಿದಂತೆ ಎಸ್.ಡಿ.ಎಂ.ಸಿಯವರು ಹೇಗಿರಬೇಕು ಎಂಬುದಕ್ಕೆ ಮಾದರಿಯಾಗಿ ನಿಂತಿದ್ದಾರೆ. ನಾವಿನ್ಯತೆಯನ್ನು ಮತ್ತು ಶಿಕ್ಷಣಕ್ಕೆ ಪೂರಕವಾದ ಪಠ್ಯೇತರ ಚಟುವಟಿಕೆಗಳನ್ನು ಭಾವಚಿತ್ರಗಳೊಂದಿಗೆ ಮಾಹಿತಿ ಸಲ್ಲಿಸಿದೆ. ಇಲ್ಲಿ ಶಿಕ್ಷಕ ವೃಂದದ ಯೋಚನೆ ಕಾರ್ಯಗತಗೊಳಿಸಿರುವುದು ಮುಖ್ಯವಾಗಿದೆ ಎಂಬುದನ್ನು ತಿಳಿಸಲು ಸಂತಸವಾಗುತ್ತದೆ.

2010-11ರಲ್ಲಿ ರಾಜ್ಯ ಸಂಪನ್ಮೂಲ ವ್ಯಕ್ತಿಗಳಾದ ಪುರುಷೋತ್ತಮ ಆದ್ವೆ ಮತ್ತು ಶ್ರೀ ಜನಾರ್ದನ ಅವುಂಬೆ ಮುಖವಾಡ ತಯಾರಿಕೆ, ಡೈ ಅಂಡ್ ಡೈ, ಗಾಳಿಪಟ ತಯಾರಿಕೆ 2009-10 ರಲ್ಲಿ ಮಕ್ಕಳ ಸಂತೆ, ವಿಜ್ಞಾನ ಮೇಳ, ಮೂಲಭೂತ ಕ್ರಿಯೆಗಳು, ತೂಕ ಸರಳ ಲೆಕ್ಕಾಚಾರಗಳು, ನಿತ್ಯಜೀವನದಲ್ಲಿ ವಿಜ್ಞಾನವು ಹೇಗೆ ಅನ್ವಯವಾಗಿದೆ ಎಂಬುದರ ಬಗ್ಗೆ ಮಾಹಿತಿ. ಶಿಕ್ಷಣಕ್ಕೆ ಸರ್ಕಾರವು ನೀಡುತ್ತಿರುವ ಸೌಲಭ್ಯಗಳನ್ನು ಸಾರ್ವಜನಿಕರಿಗೆ ತಿಳಿಯಪಡಡಿಸುವ ಶೈಕ್ಷಣಿಕರಥ, (ಇಲಾಖೆ, ಶಿಕ್ಷಕರು ಮತ್ತು ಎಸ್.ಡಿ.ಎಂ.ಯವರ ಸಹಕಾರ) ತಾಯಂದಿರ ಸಭೆ ಮತ್ತು ಅವರಿಗೆ ನಡೆಸಿರುವ ವಿವಿಧ ಸ್ಪರ್ದೆಗಳು. 2012-13 ರಿಂದ 2016-17ರ ವರೆಗೆ ಸೃಜನಶೀಲ ಕಲಿಕಾ ಕಾರ್ಯಗಾರವನ್ನು ಶಿಕ್ಷಣ ಚಿಂತಕರು ದಾನಿಗಳು ಆದ ಶ್ರೀ ಆರ್.ಎಸ್. ಗಿರಿಯವರ ನೆರವಿನಿಂದ 2 ದಿನಗಳ ಕಾಲ ನಡೆಸಲಾಗಿದೆ. ಸಂಪನ್ಮೂಲ ವ್ಯಕ್ತಿಗಳು ಶ್ರೀ ಹೆಚ್.ಎಸ್. ಉಮೇಶ್, ಪ್ರಾಂಶುಪಾಲರು, ಶಾರದ ವಿಲಾಸ ಡಿಇಡ್‌ಕಾಲೇಜ್ ಮೈಸೂರು. ಶಿಕ್ಷಣ ತಜ್ಞರು ಮತ್ತು ಸಾಹಿತಿಗಳು ಶ್ರೀ ಎಂ ಯೋಗಾನಂದ್. ರಂಗಕರ್ಮಿಗಳು ರಂಗಾಯಣ ಮೈಸೂರು.

ಕನ್ನಡ, ಇಂಗ್ಲೀಷ್ ಕಥನ ಕೌಶಲ - ಹಾಡು ಕುಶಲ ಕಲೆಗಳು ಮಕ್ಕಳಲ್ಲಿ ಹುದುಗಿರುವ ಪ್ರತಿಭೆಗಳ ಅನಾವರಣವಾಯಿತು. ಯಾವ ಮಕ್ಕಳಿಗೂ ದೊರಕದ ಅವಕಾಶ ನಮ್ಮ ಮಕ್ಕಳಿಗೆ ದೊರೆಯಿತು. 2013 ರಲ್ಲಿ ಪರಿಸರದ ಕುರಿತು ನಮ್ಮ ಮಕ್ಕಳಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ 2015 ರಲ್ಲಿ ಆಕಾಶವಾಣಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ನಮ್ಮ ಮಕ್ಕಳು. ನಮ್ಮ ಶಾಲೆಯ ಮಕ್ಕಳೇ ತಯಾರಿಸಿರುವ **'ಹೊಂಬೆಳಕು'** ಗೋಡೆ ಪತ್ರಿಕೆ ಅನಾವರಣ. ಚಿಣ್ಣರ ರಾಧಾಕೃಷ್ಣ ವೇಷ ಪ್ರದರ್ಶನ. 2008-09 ರಿಂದ 2017-18ರ ವರೆಗೆ ಪುಟಾಣಿ ವಿಜ್ಞಾನ ಮತ್ತು ನವೋದಯ ಪರೀಕ್ಷೆಗಳನ್ನು ನಡೆಸುತ್ತಿದ್ದು ಪ್ರಶಸ್ತಿ ವಿತರಣಾ ಸಮಾರಂಭ ಮಾಡಲಾಗಿದೆ. ಪ್ರತಿ ವರ್ಷ ವಿಬಿನ್ನ ರೀತಿಯಲ್ಲಿ ನಡೆಸುತ್ತಿರುವ ವಾರ್ಷಿಕ ಮಹಾಮೇಳಗಳ ಇಣಕುನೋಟ. ಸಮುದಾಯದ ಸಂಪನ್ಮೂಲಗಳಿಂದ ತರಬೇತಿ. ಪೂಜಾಕುಣಿತ ನಾಟಕ ಇತ್ಯಾದಿ. ಪೋಷಕರಿಗೊಂದು ಪ್ರಣಾಮ ಮತ್ತುಗೌರವಾರ್ಪಣೆ. ಸ್ವಚ್ಚ ಭಾರತ - ಬಾಲನಂದನ ಸಂಸ್ಥೆ ಹೆಗ್ಗೋಡು. ಇವರ ಸಹಕಾರದೊಂದಿಗೆ ಸ್ವಚ್ಚತಾ ಕಾರ್ಯಕ್ರಮ. ಪವಾಡ ಬಯಲು. ಬ್ಯಾಂಕಿಂಗ್ ಸಾಕ್ಷರತೆ. ಶೈಕ್ಷಣಿಕ ಸಂವಾದ. ಹಿರಿಯ ವಿದ್ಯಾರ್ಥಿಗಳ ಸಮ್ಮೇಳನ

ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುತ್ತಿದ್ದೇವೆ. ಈಗ ಬಂದ ಸಮಸ್ಯೆಯಗಳನ್ನು ಸವಾಲಾಗಿ ಪರಿಗಣಿಸಿ ಸಮುದಾಯಕ್ಕೆ ಸೂಕ್ತ ತಿಳಿವಳಿಕೆ ನೀಡಿ ವಿಶ್ವಾಸ ಪಡೆದು ನಡೆಸುತ್ತಿದ್ದೇವೆ ಎನ್ನುವುದು ಹೆಮ್ಮೆ ಎನಿಸುತ್ತದೆ.

ನಮ್ಮದು ಸರ್ಕಾರಿ ಶಾಲೆಯಾದರೂ ಸ್ಥಳೀಯ ದಾನಿಗಳು, ಪರ ಊರಿನ ಹೃದಯವಂತ ದಾನಿಗಳು ಅಲ್ಲದೆ ರೋಟರಿ ಸಂಸ್ಥೆ, ಧರ್ಮಸ್ಥಳ ಗ್ರಾಮೀಣಾಭಿವೃದ್ದಿ ಯೋಜನ ಸಂಸ್ಥೆ, ಮೈಸೂರಿನ ಶ್ರೀ ರಾಜರಾಜೇಶ್ವರಿ ವಸ್ತ್ರಾಲಂಕಾರದ ಮಾಲೀಕರು, ಬೆಂಗಳೂರಿನ ಯೂತ್ ಸೇವಾ ಸಂಸ್ಥೆಯವರು, ಸೆಲ್ಕೋ ಸಂಸ್ಥೆ. ಗ್ರಾಮ ಹಿತರಕ್ಷಣಾ ಸಮಿತಿ. ಸಿಸ್ಕೋ ಸಂಭ್ರಮ. ಕರ್ನಾಟಕ ಬ್ಯಾಂಕ್ ಮತ್ತು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ ಮತ್ತುಜಲಾನಯನ ಇಲಾಖೆ/ಓರಿಯಂಟಲ್ಇನ್ಸೂರೆನ್ಸ್ ಕಂಪನಿ. ಮತ್ತುಕಾಮತ್ ಕುಟುಂಬದವರು ಶಾಲೆಗೆ ನಿರಂತರವಾಗಿ ಹಣ ಮತ್ತು ವಸ್ತು ರೂಪದಲ್ಲಿ ನೆರವಾಗಿರುವುದನ್ನು ನೆನೆಯಬೇಕು.

**ಶ್ರಮದಾನ:–** ಧರ್ಮಸ್ಥಳ ಗ್ರಾಮಾಭಿವೃದ್ಧಿಯೋಜನೆ ಮತ್ತು ಎಸ್.ಡಿ.ಎಂ.ಸಿ.ಯವರು ಶಾಲೆಯ ಎಲ್ಲಾ ಕೆಲಸ ಕಾರ್ಯಗಳನ್ನು 2008–09 ರಿಂದ 2017–18 ರ ವರೆಗೆ ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದಾರೆ.

**ವಸ್ತುಗಳು :–** ಬಿಸಿಯೂಟಕ್ಕೆ ತರಕಾರಿ, ಅಕ್ಕಿ, ಪಾತ್ರೆಗಳು, ಊಟದತಟ್ಟೆ ಲೋಟಗಳು, ಡಬ್ಬ, ರುಬ್ಬುವ ಕಲ್ಲು ಇತ್ಯಾದಿ. 2015–16 ರಿಂದ 2017–18ರವರೆಗೆ ಕೊಡುಗೆಗಳ ಮಹಾಪೂರವೇ ಹರಿದು ಬಂದಿದೆ. 1) ಮಹಾದ್ವಾರ 2) ಸರಸ್ವತಿ ಮುತ್ಥಳಿ 3) ಕಿಶೋರ ಕ್ರೀಡಾಂಗಣ 4) ಚಿಲಿ–ಪಿಲಿ ಚಾವಡಿ 5) ರಂಗಮಂದಿರ 6) ಗ್ರಂಥಾಲಯ ಮತ್ತು ಪುಸ್ತಕಗಳು 7) ಹೀಗೆ ಎರಡು ದಶಕಗಳಿಂದ ದಾನಿಗಳಿಂದ ಬಂದ ಮೌಲ್ಯ 30,75,650 ರೂಪಾಯಿಗಳಾಗಿದೆ.

**ಸಂದ ಗೌರವಗಳು:–** 2005–06 ರಲ್ಲಿ ಕೆಎಸ್‌ಕ್ಯೂಎಎಸಿ ಕ್ಲಸ್ಟರ್ ಹಂತದಲ್ಲಿ ಪ್ರಥಮ. 2009–10 ಕಲಿಕೋಪಕರಣ ತಾಲ್ಲೂಕ್ ಹಂತ ಪ್ರಥಮ. 2010–11 ಉತ್ತಮ ಎಸ್,ಡಿ.ಎಂ.ಸಿ./ ಪ್ರಶಸ್ತಿ. ಜಿಲ್ಲಾ ಪಂಚಾಯತ್ ನೈರ್ಮಲ್ಯ ಪ್ರಶಸ್ತಿ. ಇನ್‌ಸ್ಪೈಯರ್ ಅವಾರ್ಡ್ ರಾಜ್ಯ ಮಟ್ಟಕ್ಕೆ ಆಯ್ಕೆ. ಪ್ರತಿಭಾಕಾರಂಜಿ, ಕಲಿಕೋತ್ಸವದಲ್ಲಿ ಉತ್ತಮ ಸಾಧನೆ. ಎನ್‌ಎಂಎಂಎಸ್ ಪರೀಕ್ಷೆ, ಪ್ರತಿ ವರ್ಷ ಒಬ್ಬ ವಿದ್ಯಾರ್ಥಿ ಆಯ್ಕೆ. ಪಢೇ ಭಾರತ್ ಬಢೇ ಬಾರತ್ ತಾಲ್ಲುಕ್‌ಗೆ ಪ್ರಥಮ. ಧನ್ವಂತರಿ ಪ್ರಶಸ್ತಿ. 2015–16 ರಲ್ಲಿ ಪ್ರಭಲ ವಿರೋಧಿಗಳ ನಡುವೆಯೂ ಪೂರ್ವ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿ ದಾನಿಗಳ ನೆರವಿನಿಂದ ಯಾವುದೇ ಕೊರತೆ ಇಲ್ಲದೇ ನಡೆಸಿತ್ತಿರುವುದು ಶ್ಲಾಘನೀಯ ವಿಷಯವಾಗಿರುತ್ತದೆ.

ಎಸ್.ಡಿ.ಎಂ.ಸಿ ಹಾಗೂ ದಾನಿಗಳ ನೆರವಿನಿಂದ ಸ್ಮಾರ್ಟ್‌ಕ್ಲಾಸ್ ಹಾಗೂ ಕಂಪ್ಯೂಟರ್ ಪಡೆದು ಹೆಚ್ಚುವರಿ ಶಿಕ್ಷಕರನ್ನು ನಿಯೋಜನೆಗೊಳಿಸಿದ್ದಾರೆ. ಬೇಸಿಗೆ ಸಿಬಿರ ನಡೆಸುಲಾಗುತ್ತದೆ. ಒಟ್ಟಾರೆ ಸಮುದಾಯದಿಂದ ಶಾಲೆಯು ಶಾಲೆಯಿಂದ ಸಮುದಾಯವೂ ಪರಸ್ಪರ ಪ್ರಗತಿ ಹೊಂದುವ ದಿಕ್ಕಿನಲ್ಲಿ ನಮ್ಮ ಶಾಲೆಯು ಮಾದರಿ ಹಾದಿಯಲ್ಲಿದೆ.
















प्रधान मंत्री कार्यालय
नई दिल्ली - 110011
PRIME MINISTER'S OFFICE
New Delhi - 110011

**संदेश**

प्रधान मंत्री जी को यह जानकर हार्दिक प्रसन्नता हुई है कि शासकीय सीनियर प्राइमरी स्कूल, गेणसिनाकुनी अपनी स्थापना का 'सुवर्ण महोत्सव' आयोजित कर रहा है एवं इस अवसर पर स्मारिका 'सुवर्णाक्षर' का प्रकाशन कर रहा है।

इस अवसर पर 'सुवर्ण महोत्सव' के सफल आयोजन एवं स्मारिका 'सुवर्णाक्षर' के सफल प्रकाशन हेतु हार्दिक शुभकामनाएं।

(पुष्पेन्द्र कुमार शर्मा)
अवर सचिव

अक्टूबर 21, 2016
नई दिल्ली

